# ಸಿನಿಮಾ ಎನ್ನುವುದು ಭಾಷೆ ಕಟ್ಟುವ ಕೆಲಸ

**ಸದ್ಯ ಕನ್ನಡದಲ್ಲಿ ಅತಿ ಹೆಚ್ಚು ಸಿನಿಮಾಗಳಲ್ಲಿ ನಟಿಸುತ್ತಿರುವ ನಟಿಯರಲ್ಲಿ ಅದಿತಿ ಪ್ರಭುದೇವ ಕೂಡ ಒಬ್ಬರು. ನೆಲದ ಘಮ, ನಭದ ಸೌರಭ ಎರಡನ್ನೂ ಬಾಚಿಕೊಂಡು ಬೆಳೆಯುತ್ತಿರುವ ಇವರು, ಸಿನಿಮಾ ಮಾಡುವುದು ಕನ್ನಡ ಕಟ್ಟುವ ಕೆಲಸ ಎಂದು ನಂಬಿರುವ ಅಪರೂಪದ ನಟಿ.**

■ **ಪದ್ಮನಾಭ ಭಟ್**



◆ **ಕೊರೊನಾ ಅಜ್ಞಾತವಾಸ ಹೇಗೆ ಕಳೆದಿರಿ?**

ನನಗೆ ಸಿನಿಮಾ ಕೆಲಸದ ನಡುವೆ ಕುಟುಂಬದೊಂದಿಗೆ ನನ್ನ ಹಳ್ಳಿಯಲ್ಲಿ ಸಾಕಷ್ಟು ಸಮಯ ಕಳೆಯಲು ಸಾಧ್ಯವಾಗುತ್ತಿರಲಿಲ್ಲ. ಈ ಈಗ ಅನಿವಾರ್ಯವಾಗಿ ದೊರೆತ ಬಿಡುವಿನ ವೇಳೆಯ ಹೆಚ್ಚಿನ ಸಮಯವನ್ನು ನಮ್ಮೂರಿಗೆ ಹೋಗಿ, ತೋಟ, ಮನೆಕೆಲಸಗಳಲ್ಲಿಯೇ ಕಳೆದೆ. ಮತ್ತೆ ಜೀವನವನ್ನು ಸಾವನ್ನು ತುಂಬ ಹತ್ತಿರದಿಂದ ನೋಡಿಬಿಟ್ಟೆ. 'ಜೀವನ ಕ್ಷಣಿಕ, ಯಾವುದೂ ಶಾಶ್ವತವಲ್ಲ' ಎಂಬೆಲ್ಲ ಮಾತುಗಳು ಬರೀ ಮೇಲ್ನೋಟದ ಮಾತುಗಳಾಗಿಯಷ್ಟೇ ಕೇಳಿದ್ದೆವು ನಾವೆಲ್ಲ. ಆದರೆ ಈಗ ತುಂಬ ಹತ್ತಿರದಿಂದ ಸಾವನ್ನು, ಸಂಕಷ್ಟಗಳನ್ನು ನೋಡಿದಾಗ, ಜೀವನವೇ ಅಲ್ಲೋಲಕಲ್ಲೋಲವಾದಾಗ ಬದುಕಿನ ಬಗೆಗಿನ ನಮ್ಮ ನಂಬಿಕೆಗಳು, ಆಲೋಚನೆಗಳು ಎಲ್ಲವೂ ಬದಲಾದವು.

ಇನ್ನು ಚಿತ್ರರಂಗದ ವಿಷಯಕ್ಕೆ ಬಂದರೆ, ನಾನು ಮಧ್ಯಮವರ್ಗದ ಕುಟುಂಬದಿಂದ ಏನಾದರೂ ಸಾಧನೆ ಮಾಡಬೇಕು ಎಂದುಕೊಂಡು ಈ ಕ್ಷೇತ್ರಕ್ಕೆ ಬಂದವಳು. ನನಗೆ ಈ ಎರಡು ವರ್ಷ ಬಹಳಷ್ಟು ಮುಖ್ಯವಾಗಿತ್ತು. ಆದರೆ ಏನೂ ಮಾಡಕ್ಕಾಗಲ್ಲ, ನಾನಷ್ಟೇ ಅಲ್ಲ, ಎಲ್ಲರೂ ಹಲವು ರೀತಿಗಳಲ್ಲಿ ನಷ್ಟವನ್ನೇ ಅನುಭವಿಸಿದ್ದೀವಿ. ನನಗೂ ಕೆಲವು ಆರ್ಥಿಕ ಅಡಚಣೆಗಳು ಎದುರಾಯಿತು. ಹಾಗೆಯೇ ಮಾನಸಿಕವಾಗಿಯೂ ಹಲವು ಪ್ರಶ್ನೆಗಳು ಕಾಡಲು ತೊಡಗಿದವು. ಈ ಭೂಮಿ ಮೇಲೆ ಯಾವುದೂ ಶಾಶ್ವತ ಅಲ್ಲ ಅಂತಾರಲ್ಲಾ, ಹಾಗೆಯೇ ನಮ್ಮ ಸಂಕಷ್ಟ, ಮನೋಕ್ಲೇಷೆಗಳೂ ಶಾಶ್ವತವಾಗಿ ಉಳಿಯಲಿಲ್ಲ. ಈಗ ಎಲ್ಲವೂ ಮೊದಲಿನ ಹಳಿಗೆ ಮರಳುತ್ತಿವೆ. ಕೊರೊನಾ ಸಾಕಷ್ಟು ನಿಯಂತ್ರಣಕ್ಕೆ ಬಂದಿದೆ. ದೊಡ್ಡ ದೊಡ್ಡ ಸಿನಿಮಾಗಳು ಬಿಡುಗಡೆಯಾಗುತ್ತಿವೆ. ನಮ್ಮ ಸಿನಿಮಾ ಕೂಡ ಬಿಡುಗಡೆಯ ಹಂತಕ್ಕೆ ಬಂದಿವೆ. ಇತ್ತೀಚೆಗೆ ಹೊಸದಾಗಿ ಮ್ಯಾಟನಿ, ಮಾಫಿಯಾ ಹೀಗೆ ಹಲವು ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ. ಕೆಲಸ ನಡೆಯುತ್ತಿದೆ.

◆ **ನೀವು ಅನುಭವಿಸಿದ ಸವಾಲುಗಳು ನಿಮ್ಮೊಳಗಿನ ನಟಿಯ ಮೇಲೆ ಯಾವ ರೀತಿ ಪ್ರಭಾವ ಬೀರಿದವು?**

ನಾನು ಅದಿತಿ; ನಟನೆ ಅನ್ನೋದು ನನ್ನ ಕೆಲಸ ಅಷ್ಟೆ. ಆದರು ಕೂಡ ಅನ್ನು ನಾನೇ, ಅಂದರೆ ಅದಿತಿಯೇ ಮಾಡಬೇಕಾಗುತ್ತದೆ. ಆಕಾಂಕ್ಷ ಅನ್ನೋ ಒಂದು ಪಾತ್ರ ಎಂದಿಟ್ಟುಕೊಳ್ಳೋಣ. ಆಕಾಂಕ್ಷ ಅನ್ನುವ ಒಂದು ಪಾತ್ರವನ್ನು ನಾನು ಮಾಡಬೇಕಾದರೆ ಕೂಡ ಅದಿತಿನೇ ಮಾಡುತ್ತಿರುತ್ತಾಳೆ. ಹಾಗಾಗಿ ಅದಿತಿ ಒಳಗಿನ ಕೆಲವೊಂದು ಭಾವನೆಗಳು, ಅನುಭವಗಳು ಖಂಡಿತವಾಗಿಯೂ ತುಂಬ ಸೂಕ್ಷ್ಮ ಸಂವೇದನೆಯ ಪಾತ್ರಗಳು ಅಭಿವ್ಯಕ್ತಿಗೊಳ್ಳುತ್ತಿರುತ್ತದೆ. ನಾನು ಹಳ್ಳಿಯಲ್ಲಿ ಓದಿರುವ ಮಧ್ಯಮವರ್ಗದ ಕುಟುಂಬದ ಹುಡುಗಿ ಆಗಿದ್ದರಿಂದ ಎಲ್ಲ ರೀತಿಯ ಜೀವನ ನೋಡಿದ್ದೀನಿ. ನನಗೆ ಸಗಣಿ ಬಾಚೋದಕ್ಕೂ ಬರತ್ತೆ, ಫೈವ್‌ಸ್ಟಾರ್ ಹೋಟೆಲಿನಲ್ಲಿ ಫೋರ್ಕ್‌ನಲ್ಲಿ ತಿನ್ನೋಕೂ ಬರತ್ತೆ. ಬದುಕಿನ ತೀರಾ ಕೆಳಗಿನ ಭಾಗವೂ ಗೊತ್ತು, ತೀರಾ ಮೇಲಿನ ಭಾಗವೂ ಗೊತ್ತು. ಹಾಗಾಗಿ ಬೇರೆ ಬೇರೆ ರೀತಿಯ ಪಾತ್ರಗಳನ್ನು ನಿಭಾಯಿಸುವುದಕ್ಕೆ ಸುಲಭವಾಗುತ್ತದೆ. ಈಗ ನಾನು ಮಾಡುತ್ತಿರುವ ಸಿನಿಮಾಗಳಲ್ಲಿ ಒಂದಕ್ಕಿಂತ ಇನ್ನೊಂದು ಪಾತ್ರ ತುಂಬ ವಿಭಿನ್ನವಾಗಿದೆ.

◆ **ಪಾತ್ರವನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ ನಿಮಗೆ ಯಾವ ಸಂಗತಿ ತುಂಬ ಮುಖ್ಯ?**

ನಾನು ಮುಖ್ಯವಾಗಿ ನೋಡುವುದು ಎರಡೇ ವಿಷಯಗಳು.